SC No.26/2022
CW-18 / PW-13

**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ಸತ್ರ ಮೊಕದ್ದಮೆ ಸಂಖ್ಯೆ 26/2022**

ಚಾ.ಸಾಃ 18 ಪ್ರಾ.ಸಾಃ 13

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 18.03.2026

| | | |
|---|---|---|
| ಸಾಕ್ಷಿಯ ಹೆಸರು | : | ರಾಜೆಸಾಹೇಬ ನದಾಫ್ |
| ತಂದೆಯ ಹೆಸರು | : | ಮೊಹ್ಮದ ಸಾಹೇಬ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಸಿಪಿಐ, ಜೇವರ್ಗಿ |
| ವಿಳಾಸ | : | ಜೇವರ್ಗಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ದೇವದುರ್ಗದಲ್ಲಿ ಸಿಪಿಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 15.07.2021 ರಂದು ಚಾಸಾ-17 ರವರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡೆನು. ಚಾಸಾ-10 ರವರ ಹೇಳಿಕೆ ಪಡೆದೆನು.

02. ಆರೋಪಿತರನ್ನು ಪತ್ತೆಹಚ್ಚಲು ಚಾಸಾ-8 ರವರಿಗೆ ಮೌಖಿಕವಾಗಿ ತಿಳಿಸಿದೆನು. ದಿನಾಂಕ 16.07.2021 ರಂದು ಚಾಸಾ-8 ರವರು 1 ರಿಂದ 10 ನೇ ಆರೋಪಿತರು ಹಾಜರು ಪಡಿಸಿದರು. ಆಗ ಚಾಸಾ-1, ಸಾಕ್ಷಿದಾರರ ಹಾಜರು ಇದ್ದು, ಚಾಸಾ-1 ಆರೋಪಿತರನ್ನು ಗುರುತಿಸಿದರು. ಚಾಸಾ-1 ರವರ ಮರುಹೇಳಿಕೆ ಪಡೆದೆನು. ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದೆನು. 1 ರಿಂದ 10 ನೇ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿದೆನು.

03. ಗುನ್ನೆ ಸ್ಥಳದಲ್ಲಿ ನಿಪಿ.2 ರ ಪ್ರಕಾರ ಚಾಸಾ-2, 3 ರವರ ಸಮಕ್ಷಮ ಮಹಜರ ಮಾಡಿದೆನು. ಚಾಸಾ-1 ಸ್ಥಳ ತೋರಿಸಿದರು. ಮೂರು ಹಿಡಿಗಾತ್ರದ ಕಲ್ಲುಗಳನ್ನು ಮತ್ತು ಎರಡು ಕಟ್ಟಿಗೆಗಳನ್ನು ವಶಪಡಿಸಿಕೊಂಡೆನು. ಸಾಕ್ಷಿಯು ಮು.ಮಾ.1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿದೆನು ಮತ್ತು ಪೋಟೋ ತೆಗೆಯಿಸಿದೆನು. ಸಾಕ್ಷಿಯು ನಿಪಿ.3 ರ ಪೋಟೋ ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ಮತ್ತು ಸಾಕ್ಷಿದಾರರನ್ನು ಕೂಡಿಸಿ ಒಂದು ಪೋಟೋ ತೆಗೆಯಿಸಿರುತ್ತೇನೆ. ಸಾಕ್ಷಿಯು ಗುರುತಿಸಿದ ಸದರಿ **ಪೋಟೋವನ್ನು ಸರ್ಟಿಫಿಕೇಟ್ ಹಾಜರು ಪಡಿಸುವ ಷರತ್ತಿನೊಂದಿಗೆ ನಿಪಿ.15** ಎಂದು ಗುರುತಿಸಲಾಯಿತು.

04. ಆರೋಪಿತರನ್ನು ಗುರುತು ಕವಾಯಿತ್ ನಡೆಸಲು ಪರವಾನಿಗೆ ಕೇಳಿ ನ್ಯಾಯಾಲಯಕ್ಕೆ ಪತ್ರ ಬರೆದೆನು, ನ್ಯಾಯಾಲಯದಿಂದ ಪರವಾನಿಗೆ ಕೊಟ್ಟಿರುತ್ತಾರೆ, ನಂತರ ತಹಸಿಲ್ದಾರು ರವರಿಗೆ ಮನವಿ ಪತ್ರ ಕೊಟ್ಟೆನು. ಕೋವಿಡ್ ಇದುದ್ದರಿಂದ ಆರೋಪಿತರ ಗುರುತು ಕವಾಯಿತ್ ನಡೆಸಲು ಆಗಿರುವುದಿಲ್ಲ.

05. ದಿನಾಂಕ 18.07.2021 ರಂದು ಚಾಸಾ-11 ರಿಂದ 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

06. ದಿನಾಂಕ 25.07.2021 ರಂದು ಸಿಪಿಐ ಯಾದಗಿರಿ ರವರಿಗೆ ವಡಗೇರಾ ಗುನ್ನೆ ನಂ.74/2021 ರ ದಾಖಲೆಗಳನ್ನು ಕೇಳಿ ಪತ್ರ ಬರೆದೆನು. ಸಾಕ್ಷಿಯು ಗುರುತಿಸಿದ ಸದರಿ ಪತ್ರವನ್ನು **ನಿಪಿ.16** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.16(ಎ)** ಎಂದು ಗುರುತಿಸಲಾಯಿತು.

07. ದಿನಾಂಕ 29.07.2021 ರಂದು ಸಿಪಿಐ ಯಾದಗಿರಿ ಇವರು ವಡಗೇರಾ ಗುನ್ನೆ ನಂ.74/2021 ರ ದಾಖಲೆಗಳನ್ನು ಕಳುಹಿಸಿದರು.

ಸಾಕ್ಷಿಯು ಗುರುತಿಸಿದ ಸದರಿ ದಾಖಲೆಗಳನ್ನು ಪತ್ರ ಸಹಿತ **ಒಟ್ಟಾಗಿ ನಿಪಿ.17** ಎಂದು ಗುರುತಿಸಲಾಯಿತು.

08. ಚಾಸಾ-1, 4 ರಿಂದ 7 ರವರ ನಿಪಿ.4 ರಿಂದ 8 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದೆನು.

09. ದಿನಾಂಕ 30.07.2021 ರಂದು ನಕ್ಷೆ ಕೇಳಿ ಮನವಿ ಪತ್ರ ಕಳುಹಿಸಿದೆನು. ದಿನಾಂಕ 03.10.2021 ರಂದು ನಿಪಿ.14 ರ ನಕ್ಷೆಯನ್ನು ಪಡೆದೆನು. ಸಾಕ್ಷಿಯು ಗುರುತಿದ ಪತ್ರವನ್ನು ನಿಪಿ.14(ಬಿ) ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ.14(ಸಿ) ಎಂದು ಗುರುತಿಸಲಾಯಿತು.

10. ದಿನಾಂಕ 05.10.2021 ರಂದು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿರುತ್ತೇನೆ.

(ಹಿರಿಯ ವಕೀಲರು ಬೇರೆ ನ್ಯಾಯಾಲಯಕ್ಕೆ ಹೋಗಿರುವುದಾಗಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಅವಧಿ ಕೇಳಿರುತ್ತಾರೆ, ಅವಧಿ ವಿಸ್ತರಿಸಲಾಯಿತು).

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.